ಮೊನೆಯಿಂದ ತೂರಿ ಬಂದಿರುವುದನ್ನು ನೋಡಿದರೆ ಬೆರಗುಂಟಾಗುತ್ತದೆ.

ನಾನು ಕಥೆಗಳನ್ನು ಬರೆದ ಮೇಲೆ ಅವು ಓದುಗರ ಸ್ವತ್ತಾಗುತ್ತವೆ. ಆಕಸ್ಮಿಕವಾಗಿ ಭೇಟಿಯಾದಾಗ ಯಾರಾದರೊಬ್ಬರು ನನ್ನ ಹಳೆಯ ಕಥೆಗಳನ್ನು ನೆನಪಿಸಿಕೊಂಡಾಗ ಸಂತೋಷವಾಗುತ್ತದೆ. ಲೇಖಕಿ ಸುಧಾಮೂರ್ತಿ ಅವರು ಮತ್ತು ಆಸ್ಟ್ರೇಲಿಯಾದಲ್ಲಿ ನೆಲೆಸಿರುವ ಕನ್ನಡಿಗರೊಬ್ಬರು ಈಚೆಗೆ ಭೇಟಿಯಾದಾಗ 35 ವರ್ಷಗಳ ಹಿಂದೆ ಬರೆದ ನನ್ನ 'ಒಂದೇ ಕೊಡೆಯ ಕೆಳಗೆ' ಎಂಬ ಕಥೆಯನ್ನು ನೆನಪಿಸಿಕೊಂಡು ಆ ಕಥೆಯಿರುವ ಸಂಕಲನವನ್ನು ಕೇಳಿ ಪಡೆದುಕೊಂಡರು. ಕವಿ ಲಕ್ಷ್ಮೀಪತಿ ಕೋಲಾರ ಅವರು ನಾನು ಹಿಂದೆ ಎಂದೋ ಬರೆದ 'ಪಾತಳ ಲೋಕ' ಎಂಬ ಕಥೆಯನ್ನು ಜ್ಞಾಪಿಸಿಕೊಂಡರು. ವಿಮರ್ಶಕ ಕೆ.ವಿ. ನಾರಾಯಣ 'ಕನವರಿಕೆ' ಎಂಬ ಕಥೆಯನ್ನು ನೆನಪಿಸಿಕೊಂಡರು. 'ಮುನಿತಾಯಿ' ಕಥೆಯನ್ನಂತೂ (ಚಲನಚಿತ್ರವಾದ ಕಾರಣದಿಂದ) ಬಹಳ ಜನ ನೆನಪಿಸಿಕೊಳ್ಳುತ್ತಾರೆ. ನಿರ್ದೇಶಕರಾದ ಟಿ.ಎನ್. ಸೀತಾರಾಮ್ ಮತ್ತು ಶಿವರುದ್ರಯ್ಯ 'ಗಾಂಧಿ ವೇಷಧಾರಿಯ ಕಥೆ' ಮೆಚ್ಚಿಕೊಂಡರು. ತುರ್ತುಪರಿಸ್ಥಿತಿಯಲ್ಲಿ ಬರೆದ ಸಾಂಕೇತಿಕ ಕಥೆ 'ರೂಪಾಂತರ' ಮತ್ತು ಹೆಣ ಹೊರುವ ವೃತ್ತಿಯವರ ಕಥೆ 'ಹೊರೆ ಹೊತ್ತವರು' ಅನೇಕರ ಮೆಚ್ಚಿಕೆಗೆ ಪಾತ್ರವಾಗಿವೆ. ಹೀಗೆ ಓದುಗರ ಒಂದು ಮೆಚ್ಚುನುಡಿಯೇ ನನಗೆ ಸಾಕಾಗುತ್ತದೆ. ಇಷ್ಟರಮೇಲೆ 'ಅದ್ವಿತೀಯ' ಕಥಾಸಂಕಲನಕ್ಕೆ ಮಾಸ್ತಿ ಪುರಸ್ಕಾರ ಲಭಿಸಿದಾಗ ಮಾಸ್ತಿಯವರ ಆಶೀರ್ವಾದವೇ ಪ್ರಾಪ್ತವಾದಂತಾಯಿತು. ಹೆತ್ತವರಿಗೆ ಮಕ್ಕಳನ್ನು ಯಾರಾದರೂ ಮೆಚ್ಚಿಕೊಂಡರೆ ಸಂತೋಷವಲ್ಲವೆ?

ಇನ್ನು ನಾನು ಬರೆದ ಕಥೆಯನ್ನು ಬೇರೆ ರೀತಿಯಲ್ಲಿ ಬರೆಯಬಹುದಾಗಿತ್ತು ಎಂದು ಅನ್ನಿಸುವಂತಹ ಸಂದರ್ಭಗಳು ಬಹಳ ಕಡಮೆ. ಶುದ್ಧಪ್ರತಿ ಸಿದ್ಧಪಡಿಸುವಾಗ ಅಲ್ಪ ಸ್ವಲ್ಪ ಬದಲಾವಣೆಗಳಾಗಿರಬಹುದು. 'ನರವಾಹನ' ಎಂಬ ಕಥೆಯನ್ನು ಹಸ್ತಪ್ರತಿಯಲ್ಲಿ ಓದಿ ಕತೆಗಾರ ಎಸ್. ದಿವಾಕರ್ ಓದುಗರ ನಿರೀಕ್ಷೆಯನ್ನು ಭಂಗಗೊಳಿಸುವಂಥ ಮುಕ್ತಾಯವಿರಲಿ ಎಂದು ಸೂಚಿಸಿದಾಗ ಕೊನೆಯ ಭಾಗವನ್ನು ಮತ್ತೆ ಬರೆದೆ.

ಆರಂಭದ ಹಂತದ ಎರಡು ಸಂಕಲನಗಳಲ್ಲಿ ಬರೆದ ಕಥೆಗಳಲ್ಲಿ ಅನಿರೀಕ್ಷಿತ ತಿರುವು ಮತ್ತೆ ಮತ್ತೆ ಕಾಣಿಸಿಕೊಳ್ಳುತ್ತಿತ್ತು. (ಓ. ಹೆನ್ರಿ ಪ್ರಭಾವ). ಅದೇ ನನ್ನ ಕಥೆಗಳ ಮಿತಿಯಾಗಿತ್ತು. ಅದರಿಂದ ಕಳಚಿಕೊಂಡು ವಿಭಿನ್ನ ರೀತಿಯಲ್ಲಿ ಬರೆಯುವ ಪ್ರಯತ್ನ ಮಾಡಿದೆ. ಸಾಂಕೇತಿಕತೆ, ಫ್ಯಾಂಟಸಿ, ಮಾಂತ್ರಿಕ ವಾಸ್ತವಿಕತೆ ಮುಂತಾದ ತಂತ್ರಗಳನ್ನು ಉಪಯೋಗಿಸಿಕೊಂಡು ಗಂಭೀರ ವಸ್ತುಗಳನ್ನು ಬರೆಯುವ ಮೂಲಕ ನನ್ನ ಕಥೆಗಳಿಗೆ ಹೊಸ ರೂಪವನ್ನು ಕಂಡುಕೊಳ್ಳತೊಡಗಿದೆ. ಯುಕಿಯೊ ಮಿಷಿಮ ಮತ್ತು ಮಿಲನ್ ಕುಂದೇರ ಅವರ ಕಥೆಗಳನ್ನು ಓದುವಾಗ ಹೊಸ ಹೊಸ ಸಾಧ್ಯತೆಗಳು ಹೊಳೆಯುತ್ತವೆ.

ಇಂದು ಅನೇಕ ಹೊಸ ಕಥೆಗಾರರು ಕಥೆಗಳನ್ನು ಬರೆಯುತ್ತಿದ್ದಾರೆ. ಪತ್ರಿಕೆಗಳ ಕಥಾಸ್ಪರ್ಧೆಗಳು ಹೊಸ ಹೊಸ ಪ್ರಯತ್ನಗಳಿಗೆ ಉತ್ತೇಜನ ನೀಡುತ್ತಿವೆ. ಸದಾ ಹೊಸದರ ಕಡೆಗೆ ತುಡಿತ ಮತ್ತು ಅನ್ಯ ಭಾಷೆಗಳಲ್ಲಿನ ಸಮಕಾಲೀನ ಸಾಹಿತ್ಯದ ಅಧ್ಯಯನ ಮಾತ್ರ ಹೊಸ ಸೃಷ್ಟಿಗೆ ಸ್ಫೂರ್ತಿ ನೀಡಬಲ್ಲದು. ಎಸ್. ದಿವಾಕರ್ ಮತ್ತು ನಾಗರಾಜ ವಸ್ತಾರೆ ಅಂತಹ ಪ್ರಯೋಗಗಳನ್ನು ಮಾಡುತ್ತಿದ್ದಾರೆ.

ಈವರೆಗೆ ನನ್ನ ಕಥೆಗಳು ಹೆಚ್ಚಾಗಿ ವಿಮರ್ಶೆಯ ವಿಶ್ಲೇಷಣೆಗೆ ಒಳಗಾಗಿಲ್ಲ. ಆದರೂ 'ಅದ್ವಿತೀಯ' ಕಥಾ ಸಂಕಲನಕ್ಕೆ ದಿ. ಕೆ. ನರಸಿಂಹಮೂರ್ತಿ ಅವರು ಬರೆದ ದೀರ್ಘ ಮುನ್ನುಡಿ